International Journal of Academic Research
ISSN: 2348-7666; Vol.8, Issue-1(6), January, 2021
Impact Factor: 6.232; Email: drtvramana@yahoo.co.in

# Samajika Jalatanadalli Aitihasika Kote ChannaRayadurga

-Mahesh Kumar D.H

## ಸಾಮಾಜಿಕ ಜಾಲತಾಣದಲ್ಲಿ ಐತಿಹಾಸಿಕ ಕೋಟೆ ಚನ್ನರಾಯದುರ್ಗ

**-ಮಹೇಶ್ ಕುಮಾರ್ ಡಿ.ಹೆಚ್**
ಸಂಶೋಧನಾರ್ಥಿ, ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ

ಮನುಷ್ಯ ಒಂದು ಕಡೆ ನೆಲೆನಿಂತು ಜೀವಿಸಲು ಪ್ರಾರಂಭಿಸಿದಾಗಿನಿಂದ ಅವನ ಭಾವನೆಗಳನ್ನು ಇತರರಿಗೆ ತಿಳಿಸಲು ಹಲವು ರೀತಿಯ ಮಾರ್ಗಗಳನ್ನು ಕಂಡುಕೊಳ್ಳಲು ಮುಂದಾದನು. ಅಂದಿನ ಮಾನವ ಕ್ರೂರ ಪ್ರಾಣಿಗಳಿಗೆ ಹೆದರಿ ಆಯುಧರಹಿತವಾಗಿ ಚಲಿಸಲು ಮುಂದಾಗುತ್ತಿರಲಿಲ್ಲ. ಅದೇ ಸಮಯದಲ್ಲಿ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಕಂಡಾಗ ಆತ ಆಯುಧರಹಿತ ಕೈಗಳನ್ನು ಮೇಲೆತ್ತಿದ್ದಾಗ ಮಾತ್ರ ನಾನು ನಿನ್ನ ಮಿತ್ರ ನನ್ನಿಂದ ನಿನಗೆ ಯಾವ ರೀತಿಯ ಅಪಾಯವಿಲ್ಲ ಎಂಬ ಸಂದೇಶ ರವಾನೆಯಾಗುತ್ತಿತ್ತು. ಅಂದರೆ ತನ್ನ ಭಾವನೆಯನ್ನು ದೂರದಿಂದಲೇ ಹೊರಹಾಕುವ ಸಂವಹನ ಸಾಧನವಾಗಿತ್ತು ಎಂದು ಹೇಳಬಹುದು. ಅಂದರೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೇವಲ ಸಂಜ್ಞೆಯು ಸಂವಹನವಿನಿಮಯದ ಮಾಧ್ಯಮ ಸಾಧನವಾಗಿತ್ತು. ತದನಂತರದಲ್ಲಿ ಅಂದಿನ ಮಾನವ ಲಿಪಿಯನ್ನು ಕಂಡುಹಿಡಿದು ತನ್ನ ಭಾವನೆಗಳನ್ನು ಹಂಚಿಕೊಳ್ಳಲು ಮುಂದಾದನು. ಅಲ್ಲಿಂದ ಕಥೆ, ಕಾದಂಬರಿ ಮಹಾಕಾವ್ಯಗಳು ಸೃಷ್ಟಿಯಾದವು.ಈ ಮಹಾಕಾವ್ಯಗಳು ಸಂದೇಶವನ್ನು ವ್ಯಕ್ತಿಯಿಂದ ವ್ಯಕ್ತಿಗೆ ಸ್ಥಳದಿಂದ ಸ್ಥಳಕ್ಕೆ ಕೊಂಡೊಯ್ಯುವ ಸಾಧನವಾಗಿ ರೂಪಿತವಾದವು.

ರಾಮಾಯಣ ಮತ್ತು ಮಹಾಭಾರತದ ಕಾಲದಲ್ಲಿ ಒಂದು ಸಂದೇಶವನ್ನು ವ್ಯಕ್ತಿಯಿಂದ ವ್ಯಕ್ತಿಗೆ ರವಾನಿಸಲು ಧೂತನನ್ನು ಕಳಿಸುತ್ತಿದ್ದರು. ರಾಮಾಯಣದಲ್ಲಿ ರಾವಣನ್ನು ಸೀತೆಯನ್ನು ಅಪಹರಿಸಿದ್ದು, ಲಂಕಾಪಟ್ಟಣಕ್ಕೆ  ರಾಮನ್ನು ತನ್ನ ಧೂತನಾದ ಹನುಮಂತನನ್ನು ಕಳುಹಿಸಿದ್ದು ಇಲ್ಲಿ ಸ್ಮರಿಸಬಹುದಾಗಿದೆ. ಅಂದರೆ ಧೂತನು ತಲುಪುತ್ತಿದ್ದ ಕಾಲವನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮತ್ತೆ ಅ ಧೂತನು ಸಂದೇಶವನ್ನು ಪುನಃ ತರುವವರೆಗೂ ಸಂವಹನಕಾರ್ಯ ಪೂರ್ಣಗೊಳ್ಳುತ್ತಿರಲ್ಲಿಲ್ಲ. ಕಾಳಿದಾಸನ ಕಾವ್ಯವಾದ ಮೇಘದೂತದಲ್ಲಿ ಸಂದೇಶವನ್ನು ರವಾನೆ ಮಾಡುವ ಒಂದು ಕಾಲ್ಪನಿಕ ವಸ್ತುವಾಗಿ ಮೋಡಗಳನ್ನು ಬಳಸಿರುವುದು ಶ್ಲಾಘನೀಯವಾದ್ದದು. ಅಂದರೆ ಅವನ ಆಲೋಚನೆಯ ಪರಿ, ಹಾಗೂ ಸಂದೇಶವನ್ನು ರವಾನೆ ಮಾಡುವಲ್ಲಿನ ಹೊಸ ಆಲೋಚನೆಯನ್ನು ಇಲ್ಲಿ ಗಮನಿಸಬೇಕಾಗುತ್ತದೆ. ನಂತರದ ಕಾಲಾವಧಿಯನ್ನು ಗಮನಿಸಿದಾಗ  ರಾಜರುಗಳು ನೆರೆ ರಾಜ್ಯದ ರಾಜರುಗಳಿಗೆ ಸಂದೇಶಗಳನ್ನು ರವಾನೆ ಮಾಡುವಾಗ ಪಾರಿವಾಳ ಹಾಗೂ ಕುದುರೆಗಳನ್ನು  ಬಳಸುತ್ತಿದ್ದರು. ಟಿಪ್ಪು ಸುಲ್ತಾನನು ನೆಪೋಲಿಯನ್ನನಿಗೆ ಪತ್ರದ ಮೂಲಕವೇ ಸಂವಹನವನ್ನು ಮಾಡುತ್ತಿದ್ದನೆಂದು ಇತಿಹಾಸ ಪುಟಗಳಿಂದ ತಿಳಿದಿದ್ದೇವೆ. ಬ್ರಿಟೀಷರ ಆಗಮನದಿಂದ ಸಂವಹನ ಮಾಧ್ಯಮವಾಗಿ ಅಂಚೆಯನ್ನು ನಾವು ಕಾಣಬಹುದಾಗಿದೆ. ನಂತರದ ಕಾಲದಲ್ಲಿ ತಂತಿವ್ಯವಸ್ಥೆ ಕಂಡುಹಿಡಿಯಲಾಯಿತು.ಇಲ್ಲಿ ಹೆಚ್ಚು ಸಂವಹನ ಮಾಧ್ಯಮವಾಗಿ ತಂತಿಯನ್ನು ಬಳಸಲಾಯಿತು. ಮುಂದುವರೆದು ತನ್ನ ಎಲ್ಲಾ ಕೆಲಸ ಕಾರ್ಯಗಳಲ್ಲಿ ಯಂತ್ರಗಳ ಬಳಕೆ ಮಾಡಿದನು. ಪರ್ಯಾಯವಾಗಿ ಗಣಕಯಂತ್ರವನ್ನು ಕಂಡುಹಿಡಿದನು. ಇದರ ಬಳಕೆ ಎಲ್ಲಾ ಕ್ಷೇತ್ರದಲ್ಲಿ ನಾಗಲೋಟದಲ್ಲಿ ಬೆಳೆಯಲಾರಂಭಿಸಿತು. ಇದರ ಸಹಾಯದಿಂದ ಕುಳಿತಲ್ಲಿಯೇ ಒಂದು ಸ್ಥಳದ, ವಸ್ತುವಿನ ಮಹತ್ವವನ್ನು ತಿಳಿಯಲಾರಂಬಿಸಿದನು.

ರಾಮಾಯಣ ಮಹಾಭಾರತದ ಕಾಲದಲ್ಲಿ ಒಬ್ಬ ಧೂತ ಸಂದೇಶವನ್ನು ತಲುಪಿಸುತ್ತಿದ್ದ ರೀತಿ ಹಾಗೂ  ಆಧುನಿಕ ಕಾಲದಲ್ಲಿನ ಸಂವಹನವನ್ನು ನಡೆಸುತ್ತಿದ್ದ ಪರಿಯನ್ನು ಗಮನಿಸಿದಾಗ ಸಮಯದ ಪಾಲನೆಯಲ್ಲಿ ವ್ಯತ್ಯಾಸವನ್ನು ಗಮನಿಸಬಹುದಾಗಿದೆ. ಅಂದರೆ ಮಾಹಿತಿ ಸಂವಹನ ಕಾರ್ಯದಲ್ಲಿ ಬಳಸಿದ ತಂತ್ರಜ್ಞಾನವನ್ನು ಗಮನಿಸಬಹುದಾಗಿದೆ. ಆಧುನಿಕತೆಯ ಪಥದಲ್ಲಿ ಚಲಿಸುತ್ತಾ ಮಾನವನು ಎಲ್ಲಾ ಕ್ಷೇತ್ರದಲ್ಲಿ ಗಣಕಯಂತ್ರದ ಬಳಕೆಯನ್ನು ತಂದು ನಗರ ಪ್ರದೇಶದ ಜನರು ಹೆಚ್ಚು ಸಮಯವನ್ನು ದುಡಿಮೆಯಲ್ಲಿ ತೊಡಗಿಸಿಕೊಂಡನು. ಇದರ ಪರಿಣಾಮವಾಗಿ ದೈಹಿಕ ಶ್ರಮಕ್ಕಿಂತ ಮಾನಸಿಕವಾಗಿ ಹೆಚ್ಚು ಬಳಲುತ್ತಿರುವುದನ್ನು ಕಾಣಬಹುದಾಗಿದೆ. ಇದರಿಂದ ಬೇಸತ್ತ ಮಾನವನು ಯೋಗ, ಧ್ಯಾನ, ಪ್ರಶಾಂತವಾದ ತಾಣಗಳಿಗೆ ಪ್ರವಾಸ ಕೈಗೊಳ್ಳುವುದು ಟ್ರಕಿಂಗ್ ಮುಂತಾದ ಕ್ರೀಡಾಜಗತ್ತಿನ ಕಡೆ ಇಣುಕುತ್ತಿರುವುದನ್ನು ಕಾಣಬಹುದಾಗಿದೆ.

ತನ್ನ ಮಾನಸಿಕ ಒತ್ತಡದಿಂದ ಹೊರಬರಲು ಇಂದು ಸಾಮಾಜಿಕ ಜಾಲತಾಣಗಳನ್ನು ಮರೆಹೊಗುತ್ತಿರುವುದನ್ನು ಗಮನಿಸಿದರೆ ಅನುಕೂಲ ಮತ್ತು ಅನಾನುಕೂಲಗಳೆರಡನ್ನು ಕಾಣಬಹುದಾಗಿದೆ. ತಾನು ಕುಳಿತಲ್ಲಿಯೇ ಒಂದು ಸ್ಥಳದ ಮಾಹಿತಿಯನ್ನು



Scanned with CamScanner

ಪಡೆಯುತ್ತಾನೆ ಮತ್ತು ತಾನು ತಿಳಿದ ಮಾಹಿತಿಯನ್ನು ಇತರರಿಗೂ ಹಂಚುತ್ತಾನೆ. ಇದರ ಪರಿಣಾಮವಾಗಿ ಇಂದು ತನಗೆ ಆಸಕ್ತಿ ಎನಿಸಿದ ಐತಿಹಾಸಿಕ ಸ್ಥಳಗಳಾದ ಕೋಟೆಕೊತ್ತಲಗಳು, ಐತಿಹಾಸಿಕ ರಾಜಧಾನಿಗಳು, ಪಾರಂಪರಿಕ ತಾಣಗಳನ್ನು ತನು ಕುಳಿತಲ್ಲಿಯೇ ಮಾಹಿತಿಯನ್ನು ಪಡೆದು ಆಸ್ಥಳಗಳಿಗೆ ಬೇಟಿನೀಡಲು ಸಾಮಾಜಿಕ ಜಾಲತಾಣಗಳು ಪ್ರಮುಖವಾಗಿವೆ. ಅಂತಹ ಪ್ರಮುಖ ಐತಿಹಾಸಿಕ ತಾಣಗಳಲ್ಲಿ ಒಂದಾದ ಚನ್ನರಾಯನದುರ್ಗದ ಬಗ್ಗೆ ತಿಳಿಯೋಣ.

ಚನ್ನರಾಯನದುರ್ಗವು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ನಾಲ್ಕು ಹೋಬಳಿ ಕೇಂದ್ರಗಳಲ್ಲಿ ಒಂದಾಗಿದೆ. ತಾಲ್ಲೂಕು ಕೇಂದ್ರದಿಂದ 8ಕಿ.ಮೀ ದೂರದಲ್ಲಿದ್ದು ಪಾಳೆಗಾರರ ಕಾಲದಲ್ಲಿ ನಿರ್ಮಾಣವಾದ ಜೀವಂತ ಕೋಟೆಯಾಗಿದೆ. ಇದು ಜಿಲ್ಲಾಕೇಂದ್ರದಿಂದ ಸುಮಾರು 32 ಕಿ.ಮೀ ದೂರದಲ್ಲಿದೆ. ಕೊರಟಗೆರೆಯ ಮೂಲಕ ಹಾದು ಹೋಗುವಾಗ ತುಂಬಾಡಿ ಎಂಬ ಗ್ರಾಮದಲ್ಲಿ ಎಡಭಾಗಕ್ಕೆ 3ಕಿ.ಮೀ. ಚಲಿಸಿದರೆ ಸಿಗುವ ಗ್ರಾಮವೇ ಚನ್ನರಾಯನದುರ್ಗ. ಚನ್ನರಾಯನದುರ್ಗ ಕೋಟೆಯು ಗಿರಿದುರ್ಗವಾಗಿದ್ದು, ಉತ್ತರ ದಕ್ಷಿಣವಾಗಿ ಸುಮಾರು 3 ಕಿ.ಮೀ ಹಾಗು ಪೂರ್ವ ಪಶ್ಚಿಮವಾಗಿ 2ಕಿ.ಮೀ ಒಟ್ಟಾರೆ 5 ಕಿ.ಮೀ ವ್ಯಾಪ್ತಿಯನ್ನು ಒಳಗೊಂಡಿದೆ. ಈ ಬೆಟ್ಟವು ಸಮುದ್ರಮಟ್ಟದಿಂದ ಸುಮಾರು 3734 ಅಡಿ ಎತ್ತರದಲ್ಲಿದೆ. ಪ್ರಸ್ತುತ ಊರಿಗೂ ಕೋಟೆ ಗೋಡೆ ಆವರಿಸಿರುವುದು ಕಂಡು ಬರುತ್ತದೆ. ಚನ್ನರಾಯನದುರ್ಗವನ್ನು ಶಾಸನಗಳಲ್ಲಿ ಪ್ರಸನ್ನಗಿರಿ, ಚಂದ್ರಾಯನ ದುರ್ಗ, ಚನ್ನರಾಯನದುರ್ಗ ಎಂಬ ಹೆಸರುಗಳಿಂದ ಕರೆಯಲಾಗುತ್ತಿದೆ. ಈ ದುರ್ಗವನ್ನು ಮಧುಗಿರಿಯ ಪಾಳೇಗಾರನಾದ ಚಿಕ್ಕಪ್ಪಗೌಡನ ಕಿರಿಮಗನಾದ ಚನ್ನರಾಯನು ಅಕಾಲಿಕ ಮರಣವನ್ನಪ್ಪಿದನು. ಅದರ ನೆನಪಿಗಾಗಿ 1613ರ ಆನಂದ ನಾಮ ಸಂವತ್ಸರದ ಮಾಘಬಹುಳ ಪಂಚಮಿ ಗುರುವಾರದಂದು ನಿರ್ಮಿಸಲಾಯಿತು.[1] ನಂತರದಲ್ಲಿ 1766ರಲ್ಲಿ ಮರಾಠರು ಈ ಕೋಟೆಯನ್ನು ಆಕ್ರಮಿಸಿಕೊಂಡಿದ್ದರು. ಇದರ ಪ್ರತಿಯಾಗಿ ಕೋಟೆಯ ಪಶ್ಚಿಮ ಬಾಗಿಲಿನ ಬಲಭಾಗದಲ್ಲಿ ಶಾಸನವನ್ನು ಕೆತ್ತಲಾಗಿದೆ. ಆನಂತರ ಮೈಸೂರು ರಾಜರ ದಂಡನಾಯಕನಾದ ಕೋಮಾರಯ್ಯನು ವಶಪಡಿಸಿಕೊಂಡನು. ಇವನ ನಂತರ ಹೈದರಾಲಿ ವಶಪಡಿಸಿಕೊಂಡು ನಶಿಸಿದ ಕೋಟೆಯನ್ನು ಜೀರ್ಣೋದ್ಧಾರ ಮಾಡಿದನು.[2]

ಚನ್ನರಾಯನದುರ್ಗ ಕೋಟೆಯು 7 ಸುತ್ತಿನ ಕೋಟೆಯನ್ನು ಒಳಗೊಂಡಿದ್ದು ಚನ್ನರಾಯನದುರ್ಗ ಗ್ರಾಮವು ಒಂದು ಸುತ್ತಿನ ಕೋಟೆಯನ್ನು ಬಳಸಿದೆ ಉಳಿದ 6 ಸುತ್ತುಗಳು ಕೋಟೆಯನ್ನು ಆವರಿಸಿವೆ. ಈ ಕೋಟೆಯು ಸುಮಾರು 10 ಬಾಗಿಲುಗಳನ್ನು ಒಳಗೊಂಡಿದೆ. ಅವುಗಳೆಂದರೆ ದಕ್ಷಿಣಕ್ಕಿರುವ ಬಾಗಿಲನ್ನು ಇದನ್ನು ಕೊರಟಗೆರೆ ಬಾಗಿಲು ಎಂದು ಕರೆಯುತ್ತಾರೆ. ಕೆಳಗಿನಿಂದ ನೋಡಿದಾಗ ಈ ಬಾಗಿಲು ನೇರವಾಗಿ ಕಂಡು ಬರುವುದಿಲ್ಲ. ಬಾಗಿಲು ಪಶ್ಚಿಮ ದಿಕ್ಕಿಗಿದೆ. ನಂತರದಲ್ಲಿ ಉತ್ತರದಲ್ಲಿ ಬಾಗಿಲು ಹೊಂದಿದ್ದು ಇದನ್ನು ಮಧುಗಿರಿ ಹೆಬ್ಬಾಗಿಲು ಎಂದು ಕರೆಯುತ್ತಾರೆ. ಈ ಬಾಗಿಲುಗಳು ವಿಜಯನಗರದ ಶೈಲಿಯಲ್ಲಿ ರಚಿಸಲಾಗಿದ್ದು, ಲಲಾಟದಲ್ಲಿ ಗಣೇಶನ ಶಿಲ್ಪ ಕೆತ್ತಲಾಗಿದೆ. ಬಾಗಿಲು ಕಂಬಗಳಲ್ಲಿ ಪಟ್ಟಿಯನ್ನು ಕೆತ್ತಲಾಗಿದೆ. ಬಾಗಿಲ ಮೇಲ್ಭಾಗದಲ್ಲಿ ಗಾರೆಯಿಮದ ಮಾಡಿದ 4 ಪಟ್ಟಿಗಳನ್ನು ಒಳಗೊಂಡಿದ್ದು, ಮೊದಲ ಪಟ್ಟಿಯಲ್ಲಿ ಅರಳಿದ ಹೂ ಎರಡನೇ ಪಟ್ಟಿಯಲ್ಲಿ ತೋರಣಗಳನ್ನು ಮೂರನೇ ಪಟ್ಟಿಯಲ್ಲಿ ಚಕ್ರವನ್ನು ಕೆತ್ತಲಾಗಿದೆ. ಈ ಬಾಗಿಲುಗಳಿಗೆ ಹೆಸರುಗಳನ್ನಿಡಲು ಆ ದಿಕ್ಕುಗಳಲ್ಲಿರುವ ಪ್ರಮುಖ ಗಡಿ ರಾಜ್ಯಗಳಾಗಿದ್ದರಿಂದ ಆ ಪಟ್ಟಣಗಳ ಹೆಸರುಗಳಿಂದ ಕರೆದಿದ್ದಾರೆ. ಮಧುಗಿರಿ ದ್ವಾರಬಾಗಿಲ ಎಡಭಾಗದ ಸ್ವಾಭಾವಿಕ ಬಂಡೆಯಲ್ಲಿ ಸುಮಾರು 4 ಅಡಿ ಎತ್ತರದ ಆಂಜನೇಯ ಮೂರ್ತಿಯನ್ನು ಕೆತ್ತಲಾಗಿದ್ದು ಇದಕ್ಕೆ ಚಿಕ್ಕದಾದ ಮಂಟಪವನ್ನು ರಚಿಸಿದ್ದು ಇಂದು ನಶಿಸಿಹೋಗಿದೆ.

ಕಣಜಗಳು ಕೋಟೆಯ ಸ್ಮಾರಕಗಳಲ್ಲಿ ಅತೀ ಮುಖ್ಯವಾದ ಭಾಗಗಳೆಂದರೆ ತಪ್ಪಾಗಲಾರದು. ದುರ್ಗದಲ್ಲಿ ಬಹಳ ವರ್ಷಗಳ ಕಾಲ ಕೆಡದೆ ಉಪಯೋಗಿಸಲು ಯೋಗ್ಯವಾದ 22 ವಸ್ತುಗಳನ್ನು ಸಂಗ್ರಹಿಸಬೇಕೆಂದು ಕೌಟಿಲ್ಯನು ತನ್ನ ಕೃತಿಯಾದ ಅರ್ಥಶಾಸ್ತ್ರದಲ್ಲಿ ಹೇಳಿದ್ದಾನೆ. ಈ ರೀತಿಯ ವಸ್ತುಗಳನ್ನು ಸಂಗ್ರಹಿಸುವ ಸ್ಮಾರಕಗಳೇ ಕಣಜಗಳಾಗಿವೆ. ಇಲ್ಲಿ ತುಪ್ಪದ ಕಣಜ, ಭತ್ತದ ಕಣಜ, ಉಪ್ಪಿನ ಕಣಜಗಳನ್ನು ಇಂದಿಗು ಕಾಣಬಹುದಾಗಿದೆ. ಸಂಗ್ರಹಗಳಿಗಿಂತಲೂ ಮುಖ್ಯವಾದದ್ದು ಧಾನ್ಯ ಸಂಗ್ರಹವೆಂದು ನೀತಿವಾಕ್ಯಮೃತದಲ್ಲಿ ಹೇಳಲಾಗಿದೆ.[3]ಕೋಟೆಯ ಭದ್ರವಾದ ಸ್ಥಳದಲ್ಲಿ ಮದ್ದು ಗುಂಡುಗಳನ್ನು ರಕ್ಷಿಸುವುದಕ್ಕಾಗಿ ಮದ್ದಿನ ಮನೆಗಳನ್ನು ನಿರ್ಮಿಸುತ್ತಿದ್ದರು. ಚನ್ನರಾಯನದುರ್ಗ ಕೋಟೆಯಲ್ಲಿ ಮದ್ದಿನ ಮನೆ ನಿರ್ಮಿಸಲಾಗಿದ್ದು ಇದನ್ನು ನೆಲಮಾಳಿಗೆ ಎಂದು ಸ್ಥಳೀಯರು ಕರೆಯುತ್ತಾರೆ. ಗರಡಿ ಮನೆಯನ್ನು ಎಲ್ಲಾ ಕೋಟೆಗಳಲ್ಲಿಯೂ ನಿರ್ಮಿಸಲಾಗಿರುತ್ತದೆ. ಇದರ ಉದ್ದೇಶವೆಂದರೆ ತಮ್ಮ ಸೈನಿಕರು ದೇಹದಾಡ್ಯತೆಯನ್ನು ಹೊಂದಿ ಶತ್ರುಗಳನ್ನು ಹಿಮ್ಮೆಟ್ಟಿಸುವ ಸಲುವಾಗಿ ಸಾಹಸ ಕ್ರೀಡೆಗಳನ್ನು ಕಲಿಯುವ ಸಲುವಾಗಿ, ಇದನ್ನು ನಿರ್ಮಿಸುತ್ತಿದ್ದರು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಕೂಡ ಕೋಟೆಯು ಎಷ್ಟು ಮುಖ್ಯವೋ ಅದೇ ರೀತಿ ಸೈನ್ಯವು ಅಷ್ಟೇ ಮುಖ್ಯ ಎಂದೇಳಿದ್ದಾನೆ.[4] ಚನ್ನರಾಯನದುರ್ಗದ 2ನೇ ಕೋಟೆಯನ್ನು ದಾಟಿ ಮೆಟ್ಟಿಲುಗಳನ್ನು ಏರಿದರೆ ಗರಡಿ ಮನೆ ಕಂಡು ಬರುತ್ತದೆ. ಇದು ಚೌಕಾಕಾರದಲ್ಲಿದ್ದು ಒಳಭಾಗವನ್ನು ಮಣ್ಣು ಮತ್ತು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಇದು ಉತ್ತರಕ್ಕೆ ಬಾಗಿಲು ಹೊಂದಿದೆ.



Scanned with CamScanner

**ಅರಮನೆಯ ಕಟ್ಟಡಗಳು**

ಸಾಮಾನ್ಯವಾಗಿ ಕೋಟೆಯ ನಿರ್ಮಾಣದಲ್ಲಿ ಅರಮನೆಗಳ ಪಾತ್ರ ವಿಶೇಷವಾಗಿರುತ್ತದೆ. ಕಾರಣ ಇದರಲ್ಲಿ ರಾಜ ಹಾಗು ಆತನ ಕುಟುಂಬ ವಾಸಿಸುವುದರಿಂದ ಅವರಿಗೆ ರಕ್ಷಣೆ ಮುಖ್ಯವಾಗಿರುತ್ತದೆ. ಆದ ಕಾರಣ ಅರಮನೆ ಕಟ್ಟಡಕ್ಕೆ ವಿಶೇಷ ಮಹತ್ವ ನೀಡಿ ಉತ್ತಮ ಆಯಾಕಟ್ಟಿನ ಜಾಗದಲ್ಲಿ ನಿರ್ಮಿಸಲಾಗಿರುತ್ತದೆ. ಅಂದರೆ ಅರಮನೆಯ ಸುತ್ತಲು ಭದ್ರವಾದ ಕೋಟೆಯನ್ನು ನಿರ್ಮಿಸಿ ರಾಜನಿಗೆ ಮತ್ತು ಅವನ ಕುಟುಂಬದವರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಅಲ್ಲಿ ಕಲ್ಪಿಸಲಾಗಿರುತ್ತದೆ. ಅದೇ ರೀತಿಯಾಗಿ ಚನ್ನರಾಯನದುರ್ಗದ ಕೋಟೆಯಲ್ಲಿಯೂ ಸಹ ಅರಮನೆಗೆ ಉತ್ತಮ ರೀತಿಯಲ್ಲಿ ರಕ್ಷಣೆ ನೀಡಲಾಗಿದೆ.

ಕೋಟೆಯ ಅರಮನೆಯನ್ನು ಪ್ರವೇಶಿಸಲು 2 ಮುಖ್ಯ ದ್ವಾರಗಳಿವೆ. ಮೊದಲ ದ್ವಾರವು ತನ್ನ ಕುಲದೇವರಾದ ಚೆನ್ನಕೇಶವ ದೇವಾಲಯದ ಪೂರ್ವಕ್ಕೆ ಮುಖ ಮಾಡಿದ ಮುಖ್ಯ ಬಾಗಿಲು ಹಾಗು ಚನ್ನ ಕೇಶವ ದೇವಾಲಯದ ಉತ್ತರಕ್ಕಿರುವ ಬಾಗಿಲು ಈ ಬಾಗಿಲು ದಕ್ಷಿಣದ ಕಡೆ ತೆರೆದಿದೆ. ಇದರ ಮೂಲಕ ಒಳ ಪ್ರವೇಶಿಸಿದರೆ, ಅರಮನೆ ಕಂಡು ಬರುತ್ತದೆ. ಇದರ ಎಡಬಾಗಕ್ಕೆ ಕಾವಲು ಗೋಪುರವಿದ್ದು, ಸೈನಿಕರ ಕಾವಲು ಮಂಟಪವು ಕಂಡು ಬರುತ್ತದೆ. ಇದನ್ನು ಪೂರ್ಣವಾಗಿ ಕಲ್ಲು ಹಾಗು ಗಾರೆಯಿಂದ ನಿರ್ಮಿಸಲಾಗಿದೆ. ಈ ಮಂಟಪವು 4 ಕಂಬಗಳನ್ನು ಒಳಗೊಂಡಿದ್ದು, ಸಾಧಾರಣ ಕೆತ್ತನೆಯಿಂದ ಕೂಡಿದೆ.

**ಅರಮನೆ ಆವರಣದ ಈಜುಕೊಳ**

ಈಜು ಕೊಳವನ್ನು ರಾಜನ ಕುಟುಂಬದವರು ಬಳಸುತ್ತಿದ್ದಾರೆಂದು ಕಂಡು ಬರುತ್ತದೆ. ಕಾರಣ ಅರಮನೆಯ ದಕ್ಷಿಣ ಭಾಗದ ಬಾಗಿಲ ಮುಂಭಾಗದಲ್ಲಿ ಈಜುಕೊಳ ಬರಯುತ್ತದೆ. ಇದರ ವಿಸ್ತೀರ್ಣವು ಪೂರ್ವ ಪಶ್ಚಿಮವಾಗಿ 7ಅಡಿ ಉದ್ದ ಉತ್ತರ ದಕ್ಷಿಣವಾಗಿ 5 ಅಡಿ ಅಗಲ ಹಾಗು 6 ಅಡಿ ಆಳವನ್ನು ಕಾಣಬಹುದು. ಇದರ ನಿರ್ಮಾಣ ಕಾರ್ಯದಲ್ಲಿ ಗಾರೆ ಇಟ್ಟಿಗೆಯನ್ನು ಬಳಸಲಾಗಿದೆ. ಇದರ ಒಳಗೆ ಇಳಿಯಲು ಮೆಟ್ಟಿಲುಗಳ ವ್ಯವಸ್ಥೆಯನ್ನು ಮಾಡಲಾಗಿದ್ದು, ಈ ಮೆಟ್ಟಿಲುಗಳು ದಕ್ಷಿಣದ ಕಡೆಯ ಗೋಡೆಗೆ ಇಡಲಾಗಿದೆ. ಅಲ್ಲದೆ ಕೊಳದ ನೀರು ಹೊರ ಹೋಗಲು ಕೊಳವೆ ಮಾಡಲಾಗಿದೆ. ಈಜು ಕೊಳದ ಗೋಡೆಯ ಮಧ್ಯಭಾಗದಲ್ಲಿ ಕಲ್ಲುಗಳನ್ನು ಇಡಲಾಗಿದ್ದು, ಸ್ಪಷ್ಟವಾಗಿ ಇದು ಈಜುಕೊಳವೆಂದು ಗುರ್ತಿಸಬಹುದಾಗಿದೆ. ಪ್ರಾಚೀನ ಕಾಲದಿಂದಲೂ ಈಜುಕೊಳದ ಕಲ್ಪನೆ ಇರುವುದು ನಮಗೆಲ್ಲ ತಿಳಿದ ವಿಷಯ. ಸಿಂಧೂ ನಾಗರೀಕತೆಯಲ್ಲಿ ಸಹ ವ್ಯವಸ್ಥಿತವಾದ ಈಜುಕೊಳವನ್ನು ನಿರ್ಮಿಸಿರುವುದು ನಮಗೆ ತಿಳಿದು ಬರುತ್ತದೆ.[5] ಚನ್ನರಾಯನದುರ್ಗದಲ್ಲಿ ಸ್ವಾಭಾವಿಕ ನೀರನ್ನು ತಡೆ ಹಾಕಿದ್ದು ನಿರ್ಮಿಸಿದರೂ ಕೂಡ ನೀರು ಹೊರ ಹೋಗುವ ವ್ಯವಸ್ಥೆ ಮಾಡಲಾಗಿದೆ.[6]

ಹೀಗೆ ಹತ್ತು ಹಲವು ವಿಶೇಷತೆಗಳಿಂದ ಕೂಡಿದ ಚನ್ನರಾಯನದುರ್ಗ ಕೋಟೆಯನ್ನು ವೀಕ್ಷಿಸಲು ದೇಶವಿದೇಶದಿಂದ ಪ್ರವಾಸಿಗರು ಬೇಟಿನೀಡಲು ಪ್ರಮುಖ ಕಾರಣಗಳಲ್ಲಿ ಸಾಮಾಜಿಕ ಜಾಲತಾಣವು ಒಂದಾಗಿದೆ. ಇದರಲ್ಲಿ ಕೋಟೆಯನ್ನು ಏರಲು ಯಾವ ಸಮಯ ಸೂಕ್ತವಾದದ್ದು, ಜಿಲ್ಲಾಕೇಂದ್ರದಿಂದ ಯಾವ ಮಾರ್ಗ ಸೂಕ್ತ, ಗಿರಿಯನ್ನೇರಲು ಯಾವ ಸಲಕರಣೆಗಳು ಅತಿಮುಖ್ಯ ಕೋಟೆಯ ಪ್ರಮುಖ ಸ್ಥಳಗಳು, ದೇವಾಲಯ, ಕೋಟೆಯ ಮಹತ್ವ ಎಂಬ ಅಲವು ವಿಚಾರಗಳನ್ನುವಿನಿಮಯ ಮಾಡಲು ಮತ್ತು ಜಾಲತಾಣದಲ್ಲಿ ನೋಡಿ ಪೂರ್ವತಯಾರಿಯಾಗಿ ಬರಲು ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸಲು ಇಂದು ಉಪಯುಕ್ತವಾಗಿದೆ. ಇದನ್ನು ಮನಗೊಂಡು ಪ್ರವಾಸೋದ್ಯಮ ಇಲಾಖೆಯು ಪ್ರವಾಸಿಗರಿಗೆ ಮೂಲಭೂತ ಸೌಕರ್ಯವನ್ನು ಹೊದಗಿಸಿಕೊಡುವುದರ ಮೂಲಕ ಇದನ್ನು ಅಭಿವೃದ್ಧಿಪಡಿಸಿ ಮುಂದಿನ ಪೀಳಿಗೆಗೆ ಸಂರಕ್ಷಿಸಬೇಕಾಗಿದೆ.

**ಆಕರ ಗ್ರಂಥಗಳು**

1. ಸಿ.ಎನ್.ಭಾಸ್ಕರಪ್ಪ : "ತುಮಕೂರು ಜಿಲ್ಲಾ ದರ್ಶನ", 1981, ತುಮಕೂರು ಟೈಮ್ಸ್ ಪ್ರಕಾಶನ, ತುಮಕೂರು, ಪು.ಸಂ.165
೨. ಅದೇ.ಪು.ಸಂ. ೧೬೬.
೩. ದೀಕ್ಷಿತ್ ಜಿ.ಎಸ್., ೨೦೦೦ : ಸೋಮದೇವ ವಿರಚಿತ ನೀತಿ ವಾಕ್ಯಮೃತ, ಪು.೨೦೬
೪. ಅದೇ ಪು.೨೧೦
೫. ಅದೇ ಪು.೨೧೧
೬. ಚಂದ್ರಶೇಖರ್ (ಸಂ), ೨೦೧೭, ತುಮಕೂರು ಜಿಲ್ಲಾ ಗೆಜಿಟಿಯರ್, ಅಭಿಮಾನಿ ಪಬ್ಲಿಕೇಷನ್ ಬೆಂಗಳೂರು, ಪು.ಸಂ.೮೮೧.



Scanned with CamScanner